ಶ್ರೀ ಕೆ. ಎಚ್. ಪಾಟೀಲ್.— ಅದನ್ನು ಮಾಡುವುದು ಹೇಗೆ ಎನ್ನುವ ಡಿಟೇಲ್‌ಗೆ ತಾವು ಸಲಹೆ ಕೊಟ್ಟ ನಂತರ ಆ ಭಾಗದ ಜನರಿಂದ ಒಂದು ಕಮಿಟಿ ಕಾನ್ಸ್‌ಟ್ಯೂಟ್ ಮಾಡುತ್ತೇವೆ. ಅವರ ಅಭಿಪ್ರಾಯ ತೆಗೆದುಕೊಂಡು ಸರ್ಕಾರದ ಸಲಹೆಯನ್ನು ನಿಮ್ಮ ಮುಂದೆ ಇಡುತ್ತೇವೆ. ನಿಮ್ಮ ನಮ್ಮ ಒಪ್ಪಿಗೆಯಿಂದ ಏಕರೂಪತೆಯನ್ನು ತರುವುದಕ್ಕೆ ಪ್ರಯತ್ನ ಮಾಡೋಣ.

Petition *re* : food grain levy, inter state restrictions on movement and Nationalisation of wholesale Trades Presentation

ಶ್ರೀ ಟಿ. ಆರ್ ಶಾಮಣ್ಣ (ಕೋಟಿ).— ಸನ್ಮಾನ್ಯ ಅಧ್ಯಕ್ಷರೇ, ಶ್ರೀಯುತರುಗಳಾದ ಭೂಪಾಲಂ ಆರ್. ಚಂದ್ರಶೇಖರಯ್ಯ ಹಾಗೂ ಇತರರು ಆಹಾರ ಧಾನ್ಯಗಳ ಲೇವಿ, ಜಿಲ್ಲೆಯಿಂದ ಜಿಲ್ಲೆಗೆ ಸಾಗಾಣಿಕೆಯ ನಿಷೇಧ ಹಾಗೂ ಸಗಟು ವ್ಯಾಪಾರವನ್ನು ರಾಷ್ಟ್ರೀಕರಣಗೊಳಿಸುವ ಬಗ್ಗೆ ಸಹಿ ಮಾಡಿದ ವಿನಂತಿಯೊಂದನ್ನು ಒಪ್ಪಿಸುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ.

2-30 P. M.

MADAM SPEAKER :—The Petition is Presented. **Affairs at the M. I. S. L.** Sri Abdul-Khuddus Anwar (Bhadravathi) :—I had given a Call Attention Notice and so far I have not heard about it. Two deaths have occured due to police firing in MISL.

ಅಧ್ಯಕ್ಷರು.—ಸ್ಟೇಟ್‌ಮೆಂಟ್ ಬರಬೇಕು, ಬಂದನಂತರ ನಾವು ಕಾಲಿಂಗ್ ಅಟೆನ್‌ಷನ್ ನೋಟಿಸನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಹಾಕುತ್ತೇವೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್ :—ಭದ್ರಾವತಿ ವಿಷಯ ಬರಬಾರದು ಎಂದು ಇದೆಯೇ ? ತಮಗೂ ಕೇಳಿಕೊಂಡಿದ್ದು ಆಯಿತು, ಅಲ್ಲಿ ಇಬ್ಬರು ಸತ್ತಿದ್ದಾರೆ, ಅವರ ಹೆಣಗಳು ಬಿದ್ದಿದ್ದರೆ ಅವರಿಗೆ ದುಡ್ಡು ಕೊಡುವುದು ಬೇಡವೇ ? ಸಸ್ಪೆಂಡ್ ಆಗಿರುವವರಿಗೆ ದುಡ್ಡು ಕೊಡುವುದು ಬೇಡವೇ ? How long will the Government take to give reply ?

MADAM SPEAKER.— You can go and ask them.

ಶ್ರೀಅಬ್ದುಲ್ ಖುದ್ದೂಸ್ ಅನ್ವರ್—ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ, ಇದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೂ ತಿಳಿಸಿದ್ದೇನೆ, ತಮಗೂ ತಿಳಿಸಿದ್ದೇನೆ, ತಾವು ಕೂಡ ಉತ್ತರ ಕೊಡಲಿಲ್ಲಾ.

ಅಧ್ಯಕ್ಷರು.—ಮಾನ್ಯ ಸದಸ್ಯರು ಏತಕ್ಕೆ ಹೀಗೆ ಮಾತನಾಡುತ್ತಿದ್ದಾರೆ ; ತಾವು ಹೊಸದಾಗಿ ಅಸೆಂಬ್ಲಿಗೆ ಬಂದವರ ಹಾಗೆ ಮಾನಾಡುತ್ತಿದ್ದೀರಿ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್—ಸುಮ್ಮನೆ ಇದ್ದರೆ ಏನೂ ಆಗುವುದಿಲ್ಲ, ಅಲ್ಲಿಯ ಕೆಲಸಗಾರರಿಗೆ ರೆಮ್ಯುನರೇಷನ್ ಇಲ್ಲ. ಆ ಜನಗಳ ಗತಿ ಏನು ಆಗಬೇಕು ?

ಅಧ್ಯಕ್ಷರು.—ಸರ್ಕಾರದಿಂದ ಸ್ಟೇಟ್‌ಮೆಂಟ್ ಬರುವವರೆಗೆ ನಾವು ನಿಮ್ಮ ಕಾಲಅಟೆನ್‌ಷನ್ ನೋಟೀಸನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಹಾಕುವ ಹಾಗಿಲ್ಲ.

SRI ABDUL KUDDUS ANWAR.—If I Cannot get reply I have only to walk out.

(ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್ ಅವರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಎಚ್. ಡಿ. ದೇವೇಗೌಡ.—ಇಂಥ ಪ್ರಶ್ನೆ ಬಂದಾಗ ತಾವು ಸರ್ಕಾರಕ್ಕೆ ಸೂಚನೆ ಕೊಡಬೇಕು.

ಅಧ್ಯಕ್ಷರು.—ನಾವು ಸೂಚನೆ ಮಾಡಿಲ್ಲ ಎಂದು ತಾವು ಏತಕ್ಕೆ ತಿಳಿದುಕೊಳ್ಳಬೇಕು ?

SRI M. S. KRISHNAN—Did the hon. memrer walk out as a protest against the Secretariat or is it in protest against the Government which has not given any reply ?

ಶ್ರೀ ಕೋಣಂದೂರು ಲಿಂಗಪ್ಪ—ನಾವು ಅನುಭವಿಸುತ್ತಾ ಇರುವುದು ಅವರಿಗೆ ಅನುಭವ ವಾಗಿರುವುದರಿಂದ ಅವರು ದಿಟ್ಟವಾದ ನಿಲುವನ್ನು ತೆಗೆದುಕೊಂಡು ವಾಕ್ ಔಟ್ ಮಾಡಿರುವುದರಿಂದ ಶ್ರೀಮಾನ್ ಅನ್ವರ್ ಖುದ್ದೂಸ್ ಅವರಿಗೆ ನಮ್ಮ ಅಭಿನಂದನೆಯನ್ನು ಸಲ್ಲಿಸುತ್ತೇವೆ.

Replies due to the call Attention notices

†ಶ್ರೀ ಎಸ್. ಬಂಗಾರಪ್ಪ. —ನಾವು ಗಮನ ಸೆಳೆಯಂಥ ಸೂಚನೆಗಳನ್ನು ಕೊಟ್ಟು ಹಲವಾರು ದಿವಸ ಗಳಾಗಿರುತ್ತವೆ. ಸರ್ಕಾರದಿಂದ ಉತ್ತರ ಬರುವವರಿಗೆ ನಾವು ಏನೂ ಮಾಡುವುದಕ್ಕಾಗುವುದಿಲ್ಲಾ. ಸದಸ್ಯರು ಕೊಟ್ಟಿರತಕ್ಕ ಪ್ರಶ್ನೆಗಳನ್ನು ಮತ್ತು ಗಮನ ಸೆಳೆಯುವ ಸೂಚನೆಗಳಿಗೆ ಸರ್ಕಾರದವರು ಕೂಡಲೇ ಉತ್ತರಗಳನ್ನು ಕಳುಹಿಸಬೇಕು. ಈ ಭದ್ರಾವತಿ ಫೈರಿಂಗ್ ವಿಷಯ ತಮಗೂ ಗೊತ್ತಿದ. ಇಂಥ ವಿಷಯಂಕ್ಕೆ ೨೦ ದಿವಸಗಳಲ್ಲಿ ಉತ್ತರ ಕೊಡುವುದಕ್ಕೆ ಕಷ್ಟವಾಗುವುದಿಲ್ಲ. ಭದ್ರಾವತಿ ಫೈರಿಂಗ್ ಬಗ್ಗೆ ಸಾಕಷ್ಟು ಹೇಳಿಕೆಗಳು ಬಂದಿವೆ ಮತ್ತು ಈ ಸದನದಲ್ಲಿ ಪ್ರಸ್ತಾಪವಾಗಿದೆ. ಈ ದೃಷ್ಟಿಯಿಂದ ಕೂಡಲೇ ಸರ್ಕಾರದವರು ಹೇಳಿಕೆ ಕೊಡಬೇಕು. ಜೊತೆಗೆ ಸದಸ್ಯರಾದಂಥ ಶ್ರೀಮಾನ್ ಅನ್ವರ್ ಖುದ್ದೂಸ್ ರವರು ಅದೇ ಕ್ಷೇತ್ರದಿಂದ ಬಂದವರಾದ್ದರಿಂದ ಅವರಿಗೆ ವಿಷಯ ಗೊತ್ತಿದೆ. ಆದ್ದರಿಂದ ಸರ್ಕಾರ ದವರು ಕೂಡಲೇ ಉತ್ತರ ಕಳುಹಿಸತಕ್ಕ ಏರ್ಪಾಡನ್ನು ಮಾಡಬೇಕು.

ಶ್ರೀ ಎಚ್. ಎಸ್. ಸಿದ್ದಪ್ಪ—ಕಳೆದ ತಿಂಗಳು ೨೫ನೇ ತಾರೀಖು ನಮ್ಮ ತಾಲ್ಲೂಕಿನ ಕೆಲವು ಗ್ರಾಮ ಪಂಚಾಯತಿಗಳು ಬಂದ್ ಆಗಿವೆ. ಅಲ್ಲಿಯ ಪಂಚಾಯತಿ ಸೆಕ್ರೆಟರಿ ಬೀಗ ಹಾಕಿಕೊಂಡು ಬೀಗದ ಕೈ ತೆಗೆದುಕೊಂಡು ಹೋಗಿದ್ದಾನೆ. ಪಂಚಾಯತಿ ಕೆಲಸ ನಡೆಯದ ಹಾಗೆ ಮಾಡಿದ್ದಾನೆ. ಇಷ್ಟು ಪ್ರಾಮುಖ್ಯವಾದ ವಿಷಯದ ಬಗ್ಗೆ ಸರ್ಕಾರದವರು ತಕ್ಷಣ ವಹಿಸಬೇಕು ಮತ್ತು ಗ್ರಾಮಾಂತರ ಪ್ರದೇಶ ದಲ್ಲಿ ಕೆಲಸ ನಡೆಯುವ ಹಾಗೆ ತಕ್ಷಣ ಉತ್ತರ ಕೊಡುವ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು—ಒಂದೊಂದು ದಿವಸಕ್ಕೆ ಒಂದೊಂದು ಕಾಲ್ ಅಟೆನ್‌ಷನ್ ನೋಟಿಸ್‌ಗೆ ಉತ್ತರ ಕೊಡ ಬೇಕು ಎಂದರೆ ರೂಲ್ ಕ್ಲಿಯರ್ ಆಗಿದೆ. ನಾವು ಒಂದು ಬಿಟ್ಟು ಎರಡು ಕಾಲ್ ಅಟೆನ್‌ಷನ್ ನೋಟೀಸು ಗಳನ್ನು ತೆಗೆದುಕೊಳ್ಳುತ್ತಿದ್ದೇವೆ, ಅವರವರ ವಿಷಯ ಅವರವರಿಗೆ ಮುಖ್ಯ. ಮಾನ್ಯ ತಿಮ್ಮಪ್ಪನವರಿಗೆ ಅವರ ವಿಷಯ ಮುಖ್ಯ. ನಾವು ನೋಡಿಕೊಂಡು ಯಾವ ಯಾವ ಸ್ಟೇಟ್‌ಮೆಂಟ್ ಬರುತ್ತದೆ ಅದನ್ನು ಹಾಕುತ್ತಾ ಬರುತ್ತೇವೆ. ಪಂಚಾಯತಿಗೆ ಬೀಗ ಹಾಕಿಕೊಂಡಿದ್ದಾರೆ ಎನ್ನುವುದು ಅವರಿಗೆ ಪ್ರಾಮುಖ್ಯವಾಗಿದೆ. ನನಗೆ ಅದು ಪ್ರಾಮುಖ್ಯವಾಗಿರಬೇಕಲ್ಲ. ಎಲ್ಲಾ ಸದಸ್ಯರುಗಳಿಗೆ ಅವರವರ ವಿಷಯ ಪ್ರಾಮುಖ್ಯ ಎಂದು ನಾವು ಅರ್ಥ ಮಾಡಿಕೊಂಡಿದ್ದೇವೆ. ಯಾವಾಗ ಉತ್ತರ ಬರುತ್ತದೋ ಆಗ ಅಂಥ ಕಾಲ್ ಅಟೆನ್‌ಷನ್ ನೋಟೀಸುಗಳನ್ನು ಕಾರ್ಯಕ್ರಮದ ಪಟ್ಟಿಯಲ್ಲಿ ಹಾಕಿಕೊಂಡು ಬರು ತ್ತಿದ್ದೇವೆ. ಅಷ್ಟಕ್ಕೆ ನೀವು ನನ್ನನ್ನು ಥ್ಯಾಂಕ್ಸ್ ಮಾಡಬೇಕು. ರೂಲ್ಸ್‌ನಲ್ಲಿರುವುದನ್ನೂ ಬಿಟ್ಟು ಬಿಟ್ಟು ಎರಡು ಕಾಲ್ ಅಟೆನ್‌ಷನ್ ನೋಟೀಸ್‌ಗಳನ್ನು ಒಂದು ದಿವಸದಲ್ಲಿ ತೆಗೆದುಕೊಳ್ಳುತ್ತಿದ್ದೇವೆ. ನೀವು ಹೀಗೆಲ್ಲಾ ಮಾತನಾಡಿದರೆ, ಒಂದುದಿವಸಕ್ಕೆ ಒಂದೇ ಕಾಲ್‌ಅಟೆನ್‌ಷನ್ ನೋಟೀಸ್ ಅನ್ನು ತೆಗೆದು ಕೊಳ್ಳಬೇಕಾಗುತ್ತದೆ.

ಶ್ರೀ ಎಚ್. ಎಸ್. ಸಿದ್ದಪ್ಪ—ನಿಮ್ಮ ಮೇಲೆ ನಾವು ಕಾಮೆಂಟ್ಸ್ ಮಾಡುತ್ತಾ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ —ನಾವು ಇಲ್ಲಿ ನವಂಬರ್ ೨೫ರಿಂದ ಸಭೆ ಸೇರಿದ್ದೇವೆ, ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನು ಪ್ರತಿ ದಿವಸವೂ ಹಾಕಿಲ್ಲ, ಕೆಲವು ದಿವಸಗಳಲ್ಲಿ ಬಿಟ್ಟಿದೆ ಎಂದು ನನ್ನ ಭಾವನೆ. ಸರ್ಕಾರದಿಂದ ಉತ್ತರ ಪಡೆದೂ ಈ ಸಭೆಗೆ ಒಂದಕ್ಕಿಂತ ಹೆಚ್ಚು ಕಾಲಿಂಗ್ ಅಟೆನ್‌ಷನ್ ನೋಟಿಸುಗಳನ್ನು ತೆಗೆದುಕೊಳ್ಳಬಾರದೂ ಎಂದು ನಾನು ಹೇಳುತ್ತಿಲ್ಲ. ಕಾಲಿಂಗ್ ಅಟೆನ್‌ಷನ್ ನೋಟಿಸನ್ನು ಈ ಸಭೆಯಲ್ಲಿ ಪ್ರತಿನಿತ್ಯ ತರುವುದಕ್ಕೆ ಸಾಧ್ಯವಾಗುತ್ತಿಲ್ಲ. ತಾವು ಸ್ವಲ್ಪ ರಿಯಾಯಿತಿ ತೋರಿಸಿ ಕಾಲಿಂಗ್ ಅಟೆನ್‌ಷನ್ ಮೋಷನ್‌ಗಳಿಗೆ ಉತ್ತರ ಕೊಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಸರ್ಕಾರ ದಿಂದ ಉತ್ತರಬಾರದೆ ಇದ್ದಾಗ ದಯಮಾಡಿ ಅವರಿಗೆ ಛೀಮಾರಿ ಹಾಕಬೇಕು. ಕೇಂದ್ರದಲ್ಲಿ ಧಿಲ್ಲಾನ್ ಸಾಹೇಬರು ಮಂತ್ರಿಗಳಿಗೆ ಛೀಮಾರಿ ಹಾಕಿದ್ದಾರೆ. ತಾವು.....